OS 98/15
DW-3

ಸಾಕ್ಷಿಯ ಹೆಸರುಃ ನಾಗರಾಜು ಸಿ.ಎನ್

ದಿನಾಂಕಃ 08–02–2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು</u> ಶ್ರೀ ಎಸ್ ಆರ್ ಆರ್ ವಕೀಲರಿಂದಃ

1 ನೇ ಪ್ರತಿವಾದಿ ನನ್ನ ಸಂಬಂದಿ ಎಂದರೆ ಸರಿ. ದಾವಾ ಸ್ವತ್ತುಗಳು ಸೀಬರೆಡ್ಡಿ ಮತ್ತು ಆತನ ಸಹೋದರರಿಗೆ ಸೇರಿತ್ತು ಎಂದು ನನಗೆ ನನ್ನ ತಂದೆ ಹೇಳಿದ್ದಾರೆ. ನನಗೆ ವೈಯಕ್ತಿಕ ಮಾಹಿತಿ ಇಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ನಮ್ಮ ಜಮೀನು ಇದೆ. ಅದರ ಸರ್ವೆ ನಂಬರ್ 51. ದೊಡ್ಡನರಸಿಂಹಪ್ಪ ನನ್ನ ದೊಡ್ಡಪ್ಪ. ಸರ್ವೆ ನಂಬರ್ 51 ನಮ್ಮ ಮತ್ತು ನಮ್ಮ ದೊಡ್ಡಪ್ಪನ ಭಾಗಕ್ಕೆ ಬಂದಿದೆ. ನನ್ನ ತಂದೆಯ ಹೆಸರು ಚಿಕ್ಕನರಸಿಂಹರೆಡ್ಡಿ. ನನ್ನ ತಂದೆಗೆ 3 ಜನ ಅಣ್ಣಂದಿರು. ಸರ್ವೆ ನಂಬರ್ 51ರಲ್ಲಿ ದೊಡ್ಡನರಸಿಂಹಪ್ಪ ಮತ್ತು ನನ್ನ ತಂದೆಗೆ ಮಾತ್ರ ಭಾಗ ಬಂದಿದೆ ನಾವು ನಮ್ಮ ಜಮೀನಿನಲ್ಲಿ ಬೆಳೆ ಬೆಳೆದಿದ್ದೇವೆ. ದಾವಾ ಸ್ವತ್ತಿನಲ್ಲಿ ಮೂಸುಕಿನ ಜೋಳ ಬೆಳೆದಿದ್ದಾರೆ. ವಾದಿಯರು ಬೆಳೆದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ಬೆಳೆದಿದ್ದಾರೆ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ಪ್ರತಿವಾದಿಯರಿಗೆ ಸೇರಿದ್ದು ಅಲ್ಲ ವಾದಿಯರಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

OS 98/15
DW-3

ಪ್ರತಿವಾದಿಯರ ಕುಟುಂಬಕ್ಕೆ ಎಷ್ಟು ಕಡೆ ಎಷ್ಟು ಜಮೀನು ಇದೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ನನಗೆ ಸೇರಿದ ಯಾವುದೇ ಜಮೀನು ಇಲ್ಲ ಕಾರಣ ನಾನು ಯಾವತ್ತು ದಾವಾ ಸ್ವತ್ತಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸೀಬರೆಡ್ಡಿ ಮತ್ತು ಆತನ ಅಣ್ಣ ತಮ್ಮಂದಿರನ್ನು ನೋಡಿಲ್ಲ. ಸೀಬರೆಡ್ಡಿಗೆ ಸೇರಿದ ಸ್ವತ್ತು ಎಂದು ನಾನು ನನ್ನ ತಂದೆ ನನಗೆ ಹೇಳಿದ ಮೇರೆಗೆ ಹೇಳುತ್ತಿದ್ದೇನೆ. ಚಿನ್ನಕ್ಕ ಬದುಕಿದ್ದಾಗ ದಾವಾ ಸ್ವತ್ತುಗಳ ಉಳುವೆ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಚಿನ್ನಕ್ಕ ತೀರಿ ಹೋದ ನಂತರ ವಾದಿಯರು ದಾವಾ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ. ನ್ಯಾ.ನ. ಉ. ಲೇ. ಬೆ. ಮಾ.)

ಓ.ಹೇ.ಕೇ. ಸ.ಇ.

ಅಧಿಕ ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ